ರಸಭರಿತ. ಹೆಣ್ಣಾಳುಗಳಿಗೆ ಅವಜ್ಜನಲ್ಲಿ ಸಂಕೋಚವೇ ಇರುತ್ತಿರಲಿಲ್ಲ. ತಮ್ಮ ಗುಂಪಿನ ಹೆಣ್ಣಾಳುಗಳಲ್ಲೊಬ್ಬ ಹೆಣ್ಣು ಎಂದೇ ಅಜ್ಜನ ಜೊತೆ ಸರಸದ ಮಾತಾಡುವರು. ಹಸೆ ಹಾಡು ಹಾಡುವುದರಲ್ಲಿ ಅಜ್ಜ ಎತ್ತಿದ ಕೈ. ಅರವತ್ತು ದಾಟಿದ್ದರೂ ಗಂಡು ಹೆಣ್ಣು ಭಾವಕ್ಕೆ ಭೇದ ಮಾಡದ ನಿರ್ಮಲವಾದ ತುಂಟ ಮಾತು, ಎಗ್ಗಿಲ್ಲದೆ ಆಡುತ್ತಿದ್ದ ಕೆಟ್ಟ ಬೈಗುಳ ಇದ್ಯಾವುದನ್ನೂ ಅಲ್ಲಿದ್ದವರು ಕಸುರು ಮಾಡಿಕೊಳ್ಳದೆ ಸವಿಯುತ್ತಿದ್ದರು. ಇಂಥಾ ಅಜ್ಜನ ಪಟಾಲಮ್ಮಿನಲ್ಲೇ ಮೀನಾಕ್ಷಿಯೂ, ಅವಳವ್ವ ಸುಭದ್ರವ್ವನೂ ಇದ್ದದ್ದು. ಈ ಸ್ವಭಾವಕ್ಕೇ ಜಯಂತನೂ, ಶೇಕ್ರಿಯೂ ಅಜ್ಜನನ್ನು ಗೋಳು ಹೊಯ್ದುಕೊಳ್ಳುತ್ತಿದ್ದರು. ಬೇಕಂತಲೇ ಕೆಣಕುವುದು ಆಮೇಲೆ ಬೈಸಿಕೊಂಡು ಆ ಬೈಗುಳವನ್ನೇ ಬಹುಮಾನವೆಂದುಕೊಳ್ಳುತ್ತಾ ಆಟ ಆಡಿಸುತ್ತಿದ್ದರು. ಆಗೆಲ್ಲಾ ಬಸಜ್ಜನು 'ಲೇ ಹುಡ್ರ ನಿಮ್ಮ ವಯೋಮಾನದಾಗೆ ನಾನೇನೇನು ಆಟ ಆಡಿದಿನೋ ದೇವರೇ ಬಲ್ಲ ಕಣ್ರೋ, ಎಲ್ಲೋ ಪ್ಯಾಟೆ ಸಂದಿನಾಗೆ ಕಿಸ್ದು ಬಂದು ಇಲ್ಲಿ ನನ್ನತ್ರ ತರ್ಲಾಕೆ ಬಂದಿದೀರಾ ಸರ್ರ.' ಅಂತನ್ನಲು ಶೇಕ್ರಿ ಜಯಂತ ಒಟ್ಟಿಗೇ 'ಅದೇನು ಆಟ ಆಡಿದಿಯಾ ಹೇಳು ನೋಡನ' ಅಂತ ಕೆಣಕಲು 'ನಾನು ಎಂಥಾ ಆಟ ಕಟ್ಟಿ ಆಡಿದೀನಿ ಅಂತ ಕೇಳ್ತೀರಾ' ಅಂತ ಕಲ್ಪನೆಯೋ, ಕಟ್ಟಿದ್ದೋ ತಾನು ಅಗಸರ ಪಾರಿಯನ್ನು ಹಾರಿಸಿಕೊಂಡು ಹೋಗಿ ಭದ್ರಾವತೀಲಿ ಮೂರು ತಿಂಗಳು ಕಾಲ ಹಾಕಿದ್ದು, ಅಲ್ಲಿಂದ ತಿರುಗಿ ಊರಿಗೆ ಬಂದದ್ದು ಅಂತ ಕಥೆ ಹೇಳುವುದು ಅದು ನಡೆದೇ ಇತ್ತು. ಈ ಕಥೆ ಊರಿನ ಹಿರಿಯರಿಗೆ ಗೊತ್ತಿಲ್ಲದ್ದೇನೂ ಅಲ್ಲ. ಅದ ಕೇಳಿದ ಜಯಂತ 'ಹಂಗಾದ್ರೆ ನಿಮ್ಮ ಮನೆಯಲ್ಲಿ ರಾಣಾರಂಪ ಆಗಿರ್ಬೇಕು' ಅಂದ. 'ಅದ್ಯಾಕೇಳ್ತಿಯಾ ಮನೆ ಕುರುಕ್ಷೇತ್ರ, ಮಕ್ಕಳು ಇನ್ನೂ ಸಣ್ಣವು, ನಮ್ಮಾಕೆ ತೌರಿಗೆ ಹೋಗಿಬಿಟ್ಟಿದ್ಲು. ದೊಡ್ಡಮನ್ಸಿ ಕಣ್ರೋ, ಎಲ್ಲಾ ಹೊಟ್ಟೆಗಾಕ್ಕೊಂಡು, ಬಾ ಅಂತ ಒಳಿಕ್ಕೆ ಬಿಟ್ಟಕಂಡ್ಲು' ಅಂತೇಳಿ ಈಗಿಲ್ಲದ ಸಂಗಾತಿಯನ್ನು ನೆನೆದು ಅಜ್ಜನ ಕಣ್ಣು ಒದ್ದೆಯಾದವು. 'ಮತ್ತೆ ಪಾರಿ ಗತಿ' ಅಂತ ಶೇಕ್ರಿ ಕೇಳಲು 'ಅವನು ಆಕೆ ಗಂಡ ಗಂಗಣ್ಣ ಪಾಪದೋನು ಕಣ್ರೋ, ಅಂಥಾ ದೊಡ್ಡ ಹೆಂಗ್ಸನ್ನ ಸಂಭಾಳಿಸದು ಕಷ್ಟ ಕಣಪ್ಪ, ಅಂತೂ ಅವನೂ ಅವಳನ್ನ ಒಳಿಕ್ಕೆ ಬಿಟ್ಕಂಡ ಅನ್ನು. ಅಲ್ಲಿಂದ ನಾನ್ಯಾರೋ ಅವಳ್ಯಾರೋ. ಏನೋ ಹುಡುಗಾಟ ತಿಳೀಲಿಲ್ಲ, ಬಳೀಲಿಲ್ಲ ಎಡವಟ್ಟನಾಟ ಆಡಿಬಿಟ್ವಿ, ಅಂಗಂತ ಮತ್ತೆ ಲೇ ಪೋಕ್ರಿಗಳ ನೀವ್ಯಾರನ್ನಾರ ಎಗರ್ಸಕೋದೀರಿ, ಮೀಸೆ ಹರದು ಕೈಗೆ ಕೊಡ್ತಾರೆ ಈ ಕಾಲದ ಹೆಣ್ಣುಮಕ್ಕಳು, ಹುಸಾರು' ಅಂತ ಇಷ್ಟಗಲ ನಗ್ತು. 'ಮತ್ತೇನಾರ ಬೇರೆ ಆಟ' ಅಂತನ್ನಲು ಅಜ್ಜ ಹುಸಿಮುನಿಸು ತೋರಿ 'ಲೇ ನನ್ನೇನು ಮನೆ ಮುರ್ಕ ಅಂತ ತಿಳಿದಿದೀರೇನೋ, ಆ ವಯಸ್ಸು ಅಂಗಾಡುಸ್ತು. ಬಿಡ್ರೋ ಆ ಸುದ್ದಿನ' ಅಂತಂದು 'ಲೇ ತಾಯೇರಾ ಇದನ್ನೇ ಕೇಳ್ಕೆಂತಾ ಸುಲಿಯಾದ್ನೇ ಮರ್ತಿದೀರಲ್ಲವ್ವಾ, ಕೆಲ್ಸ ಸಾಗಲಿ' ಅನ್ನಲು ಆ ಹೆಣ್ಮಕ್ಕಳೆಲ್ಲಾ ಸೆರಗು ಮುಚ್ಚಿಕೊಂಡು ನಗಾಡುವರು. 'ಅಯೋ ನಾಚ್ಗಿಲ್ಲದ್ದು ಯಾರದಾರೆ ಯಾರಿಲ್ಲಾ ಅಂತ ನೋಡದೇ ಇಲ್ಲಾ' ಅಂತಾ ಗೊಣಗಿದರೆ ಅಜ್ಜ ಅದಕ್ಕೂ 'ನಿಮ್ಮ ನಿಮ್ಮ ಮನೆಯಾಗೆ ಇಂಗೇ ನಾಚ್ಗಂಡ್ರೆ ಮಕ್ಕಳೆಂಗಾಕ್ತಾವೇ ತಾಯಂದ್ರಾ' ಅಂತ ಹಂಗಿಸಲು ಆ ಹೆಣ್ಣುಮಕ್ಕಳು ಮುಸಿಮುಸಿ ನಗುತ್ತಾ ಇದ್ದು ಬಿಡುತ್ತಿದ್ದರು.

ಮೀನಾಕ್ಷಿ ಅಡಕೆ ಸುಲಿಯುವುದರಲ್ಲಿ ಎಕ್ಸ್‌ಪರ್ಟ್ ಅಷ್ಟೇ ಅಲ್ಲ ನಡತೆಯಲ್ಲೂ ಸೈ ಅನಿಸಿಕೊಂಡವಳು. ಅದಕ್ಕೇ ಬಸಜ್ಜ ಆವಳನ್ನು ಭಾಳ ಪ್ರೀತಿಯಿಂದ ಮಗಳಂತೆ ಕಾಣುತ್ತಿತ್ತು. ಅವಳ ಬಡತನಕ್ಕೆ ಆಸರಾಗುತ್ತಿತ್ತು. ಅಂತೂ ಮೀನಾಕ್ಷಿ ತಾನು ಕೆಲಸದಲ್ಲಿ ನಿಪುಣೆಯಾಗುತ್ತಾ ಮನೆಯ ಭಾರವನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡುವಂತಾಯಿತು.

ಜಯಂತನ ಮನೆ ಅಂದರೆ ಊರಗೌಡ್ರ ಮನೆ. ಗೌಡ್ರ ಅಡಕೆ ಅಂದರೆ ಅದು ಊರಿಗೇ ದೊಡ್ಡ ರಾಶಿ. ಮನೆಯ ಹಿತ್ತಿಲು ಎಕರೆಯಷ್ಟು ವಿಸ್ತಾರ. ಅಡಕೆ ಸುಲಿಯಲು ಪ್ರಶಸ್ತವಾದ ಜಾಗ. ಜಯಂತನದ್ದೇ ಉಸ್ತುವಾರಿ. ಗೌಡ್ರು ತಿಳಿದಾಗೊಮ್ಮೆ ಬಂದು ಹೋಗುತ್ತಿದ್ದರು. ಜಯಂತನ ಪಟಾಲಮ್ಮೂ ಅಲ್ಲಿ ತಪ್ಪದೇ ನೆರೆಯುತ್ತಿತ್ತು. ಜಯಂತ, ಶೇಕ್ರಿ ಇಬ್ಬರೂ ಬಸಜ್ಜನ ಖಾಸಾ. ಆದರೆ

